**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 83 ಗ್ರಾಪಂಅ 2013(ಭಾ-7)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 31-10-2013.

**ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ 9 ಮತ್ತು 11 ಗಳನ್ನು ವಿತರಿಸುವಾಗ ಅನುಸರಿಸುವ ಕಾರ್ಯವಿಧಾನದ ಬಗ್ಗೆ.- ಪರಿಷ್ಕೃತ ಸೂಚನೆಗಳು.

**ಉಲ್ಲೇಖ:** 1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 553 ಗ್ರಾಪಂಅ 2012, ದಿನಾಂಕ: 04-01-2013.

2. ಇದೇ ಸಮಸಂಖ್ಯೆಯ ಸುತ್ತೋಲೆ ದಿನಾಂಕ: 31.10.2013.

------

ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯಲ್ಲಿ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಆಸ್ತಿಗಳನ್ನು ರಾಜ್ಯದಲ್ಲಿನ ಎಲ್ಲಾ ಗ್ರಾಮ ಪಂಚಾಯತಿಗಳು ನಮೂನೆ 9 ಮತ್ತು ನಮೂನೆ 11 ನ್ನು ನೀಡುವ ಸಂಬಂಧ ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ವಿಧಾನವನ್ನು ಅನುಸರಿಸತಕ್ಕದ್ದೆಂದು ಸೂಚಿಸಲಾಗಿತ್ತು.

(ಅ) ಯಾವುದೇ ನಾಗರೀಕನು ತನ್ನ ಆಸ್ತಿಗಾಗಿ ನಮೂನೆ 9 ಅಥವಾ ನಮೂನೆ 11 ನ್ನು ಕೋರಿದಾಗ ಸದರಿ ಆಸ್ತಿಯು ಅಧಿಕೃತವಾದದ್ದೇ ಅಥವಾ ಅಲ್ಲವೇ ಎಂಬುದನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಪರಿಶೀಲಿಸುವುದು. ಈ ಕೆಳಗೆ ನಮೂದಿಸಿರುವ ಆಸ್ತಿಗಳು ಅಧಿಕೃತ ಆಸ್ತಿಗಳಾಗಿರುತ್ತವೆ.

(i) ಮೂಲ/ಹಳೆಯ ಗ್ರಾಮ ಠಾಣಾ ವ್ಯಾಪ್ತಿಯ ಒಳಗಿರುವ ಆಸ್ತಿ/ನಿವೇಶನ.

(ii) ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆ ಮನೆಗಳ ನಿರ್ಮಾಣಕ್ಕಾಗಿ ವಸತಿ ಇಲಾಖೆಯು ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಎಚ್‌ಡಿ 55 ಹೆಚ್‌ಎಎಸ್ 2011 ದಿನಾಂಕ:30-01-2012 ರಂತೆ ಸೃಜಿಸುವ ಆಸ್ತಿ.

(iii) ಭೂ ಪರಿವರ್ತನೆಯಾದ ವ್ಯವಸಾಯದ ಜಮೀನಿನಲ್ಲಿ ನಗಾರಾಭಿವೃದ್ಧಿ ಇಲಾಖೆಯ ಸಕ್ಷಮ ಯೋಜನಾ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆಯೊಂದಿಗೆ ಸೃಜಿಸಲಾದ ಆಸ್ತಿ.

ಆಸ್ತಿಯು ಅನಧಿಕೃತವೆಂದು ಕಂಡು ಬಂದಲ್ಲಿ (ಅಂದರೆ ಮೇಲೆ ನಮೂದಿಸಿದ ಮೂರು ವಿಧದ ಆಸ್ತಿಗಳ ಪೈಕಿ ಯಾವೊಂದು ವಿಧಕ್ಕೂ ಸೇರಿಲ್ಲದಿದ್ದಲ್ಲಿ) ನಮೂನೆ 9 ನ್ನು ನೀಡತಕ್ಕದ್ದಲ್ಲ ಮತ್ತು ಇಂತಹ ಜಮೀನಿನಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಗ್ರಾಮ ಪಂಚಾಯಿತಿಯಿಂದ ನಾಗರೀಕ ಸೌಲಭ್ಯ ನೀಡುತ್ತಿದ್ದಲ್ಲಿ ಮಾತ್ರ ಕೇವಲ ನಮೂನೆ 11ನ್ನು ಮಾತ್ರ ನೀಡತಕ್ಕದ್ದೆಂದೂ ಸಹ ತಿಳಿಸಲಾಗಿತ್ತು.

ಉಲ್ಲೇಖ (1) ಮತ್ತು ಉಲ್ಲೇಖ (2) ರಲ್ಲಿನ ಸರ್ಕಾರದ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ಪುನರ್ ಪರಿಶೀಲಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಕೆಳಕಂಡ ಪರಿಷ್ಕೃತ ಸೂಚನೆಗಳನ್ನು ಹೊರಡಿಸಲಾಗಿದೆ.

ಮೇಲೆ ತಿಳಿಸಿರುವ ಹಿನ್ನೆಲೆಯಲ್ಲಿ ಇನ್ನು ಮುಂದೆ ಈ ಕೆಳಕಂಡ ಆಸ್ತಿಗಳಿಗೆ ಮಾತ್ರ **ನಮೂನೆ 9 ಹಾಗೂ 11 ಗಳನ್ನು** ವಿತರಿಸತಕ್ಕದ್ದು.

ಅ) ದಿನಾಂಕ: 04.01.2013ರ ಸುತ್ತೋಲೆಯಲ್ಲಿ ಪಟ್ಟಿ ಮಾಡಿರುವ ಆಸ್ತಿಗಳ ಮಾಲೀಕರು ಸೂಕ್ತ ದಾಖಲೆಗಳನ್ನು ಒದಗಿಸಿದರೆ ನಮೂನೆ 9 ಹಾಗೂ 11 ಅನ್ನು ವಿತರಿಸತಕ್ಕದ್ದು.

ಆ) ಸ್ಥಳೀಯ ಯೋಜನಾ ಪ್ರಾಧಿಕಾರದ **ಹೊರಗಡೆಯಿರುವ** ಪ್ರದೇಶವು ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ವ್ಯಾಪ್ತಿಗೆ ಒಳಪಡದಿರುವ ಕಾರಣ, **ಸ್ಥಳೀಯ ಯೋಜನಾ ಪ್ರಾಧಿಕಾರಗಳ ಹೊರಗಡೆ ಇರುವ ಪ್ರದೇಶಗಳಲ್ಲಿರುವ ಪ್ರಸ್ತುತ ಅಸ್ತಿತ್ವದಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಲೇಔಟ್ ಪ್ಲಾನ್‌ಗಳಿಗೆ ನಗರ ಯೋಜನಾ ನಿರ್ದೇಶನಾಲಯದ ಅನುಮೋದನೆಯ ದಾಖಲೆಯನ್ನು ಒದಗಿಸುವ ಅಗತ್ಯವಿಲ್ಲವೆಂದು ತೀರ್ಮಾನಿಸಲಾಗಿದೆ.**

ಇ) ಈ ಪ್ರದೇಶಗಳಲ್ಲಿ, ದಿನಾಂಕ: 14.06.2013 ರ ನಂತರ ಸೃಜಿಸಬಹುದಾದ ಹೊಸ ಲೇಔಟ್‌ಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ತಾಲ್ಲೂಕು ಪಂಚಾಯತಿಗಳಿಗೆ ನೀಡಲು ತೀರ್ಮಾನಿಸಲಾಗಿದೆ. ಹೊಸ ಲೇ ಔಟ್ ಪ್ಲಾನ್‌ಗಳಿಗೆ ಅನುಮೋದನೆ ನೀಡಲು ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿಗಳು ಅನುಸರಿಸಬೇಕಾದ ವಿಧಿವಿಧಾನಗಳ ಬಗ್ಗೆ **ಪ್ರತ್ಯೇಕ ಮಾರ್ಗಸೂಚಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ನಿರ್ದೇಶಕರವರಿಂದ ಹೊರಡಿಸಲಾಗುವುದು.**

ಈ) ಆದರೆ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಉದಾಹರಣೆಯಾಗಿ, ಬಿಡಿಎ, ಬಿಎಂಆರ್‌ಡಿಎ, ನೆಲಮಂಗಲ ಸ್ಥಳೀಯ ಯೋಜನಾ ಪ್ರಾಧಿಕಾರ, ಇತ್ಯಾದಿ, ಪ್ರದೇಶಗಳ **ಒಳಗಡೆಯಿರುವ** ಆಸ್ತಿಗಳಿಗೆ ಸಂಬಂಧಿಸಿದಂತೆ ದಿನಾಂಕ: 04.01.2013 ರ ಸುತ್ತೋಲೆಯಲ್ಲಿನ ಲೇಔಟ್ ಪ್ಲಾನ್ ದಾಖಲೆಯನ್ನು ಒದಗಿಸುವುದು ಕಡ್ಡಾಯವಾಗಿದೆ.

ಉ) "ಫಾರಂ ಬಿಲ್ಡಿಂಗ್/ಹೌಸ್" ಎಂದು ಪರಿಗಣಿಸುವ ಆಸ್ತಿಗಳಿಗೆ ಸಂಬಂಧಿಸಿದಂತೆ, ತಹಶೀಲ್ದಾರ್/ಕಂದಾಯ ಪರಿವೀಕ್ಷಕರವರಿಂದ ದೃಢೀಕೃತ ಪತ್ರವನ್ನು ಸಲ್ಲಿಸತಕ್ಕದ್ದು. ಇಂತಹ ಆಸ್ತಿಗಳಿಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಪ್ರಕರಣ 95(1) ರನ್ವಯ ಕೃಷಿಯೇತರ ಪರಿವರ್ತನೆಯ ಪ್ರಕ್ರಿಯೆ ಅಗತ್ಯವಿರುವುದಿಲ್ಲ. ಇಂತಹ ಅವಕಾಶಗಳು ದುರುಪಯೋಗವಾಗುವುದನ್ನು ತಪ್ಪಿಸಲು "ಫಾರಂ ಬಿಲ್ಡಿಂಗ್/ಹೌಸ್" ಆಸ್ತಿಗಳನ್ನು ಗುರುತಿಸಲು ಅನುವಾಗುವಂತೆ **ಕಂದಾಯ ಇಲಾಖೆಯು ಪ್ರತ್ಯೇಕವಾಗಿ ಹೊರಡಿಸುವ ಮಾರ್ಗಸೂಚಿಗಳನ್ನು ಪಾಲಿಸಬೇಕು.**

ಊ) ಕರ್ನಾಟಕ ಭೂ ಕಂದಾಯ ಅಧಿನಿಯಮದ ಪ್ರಕರಣ 95(2)ರನ್ವಯ **ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ**, ಕೃಷಿಯೇತರ ಪರಿವರ್ತನ ದೃಢೀಕರಣ ಪತ್ರಗಳ ಬದಲಾಗಿ ಆಸ್ತಿ ಮಾಲೀಕರು ತನ್ನ ಜಮೀನನ್ನು ಕೃಷಿಯೇತರ ಉದೇಶಕ್ಕಾಗಿ ಬಳಸಿಕೊಳ್ಳುವ ಸಂಬಂಧ ತಹಶೀಲ್ದಾರ್‌ರವರಿಗೆ ನೀಡಿದ್ದ ಮನವಿಯನ್ನಾಧರಿಸಿ ನೀಡುವ ಹಿಂಬರಹದ ಪ್ರತಿ ಅವಶ್ಯಕವಾಗಿರತಕ್ಕದ್ದು.

ಗ್ರಾಮ ಪಂಚಾಯಿತಿಗಳು ಆಸ್ತಿಗಳಿಗೆ ಸಂಬಂಧಿಸಿದಂತೆ ವಿತರಿಸುವ ನಮೂನೆ 9 ಮತ್ತು 11 ನ್ನು ದಿನಾಂಕ: 14.06.2013 ರ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಆಸ್ತಿಗಳನ್ನು ಆಧರಿಸಿ ಉಪನೋಂದಾಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಬಹುದು. ದಿನಾಂಕ: 14.06.2013 ರ ನಂತರ ಸೃಜಿಸಿದ ಆಸ್ತಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಸೂಚನೆಗಳನ್ನು ಹೊರಡಿಸಲಾಗುವುದು.

ಆದುದರಿಂದ ಎಲ್ಲಾ ಗ್ರಾಮ ಪಂಚಾಯಿತಿಗಳು ತಪ್ಪದೆ ತೆರಿಗೆ ನಿರ್ಧರಣೆ ಪಟ್ಟಿ ರಿಜಿಸ್ಟರ್ (ನಮೂನೆ-9) ಭೂಮಿ ಮತ್ತು ಕಟ್ಟಡದ ತೆರಿಗೆಗಳ ಬೇಡಿಕೆ ಮತ್ತು ವಸೂಲಿ ರಿಜಿಸ್ಟರ್ (ನಮೂನೆ-11) ಗಳನ್ನು ಕಡ್ಡಾಯವಾಗಿ ನಿರ್ವಹಿಸುವಂತೆ ಸೂಚಿಸಿದೆ.

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಹಾಗೂ ಉಲ್ಲೇಖಿತ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತೊಮ್ಮೆ ತಿಳಿಸಿದೆ.

(ಕೆ. ಯಾಲಕ್ಕಿಗೌಡ) 31/10/13
ನಿರ್ದೇಶಕರು (ಪಂ.ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

೧) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
೨) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
೩) ಎಲ್ಲಾ ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿಗಳ ಮುಖಾಂತರ.
೪) ಸಂಪಾದಕರು ಕರ್ನಾಟಕ ವಿಕಾಸ ಪತ್ರಿಕೆ/ವೆಬ್ ಸೈಟ್, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
೫) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಆಯುಕ್ತರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು.
4) ಮಹಾಪರಿವೀಕ್ಷಕರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಬೆಂಗಳೂರು.